2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **102/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಬಿ .ಸಿ ಕುಮಾರ್ | | ಪಿಡಬ್ಲ್ಯೂ - 7 |
| ತಂದೆಯ ಹೆಸರು | - ಜಿ ಚಿನ್ನಪ್ಪ | | ಸಿಡಬ್ಲ್ಯೂ -8 |
| ವಯಸ್ಸು | - 42 ವರ್ಷ | | |
| ಉದ್ಯೋಗ | - ಎಲೆಕ್ಟ್ರಿಷನ್ ಕೆಲಸ | | |
| ವಾಸ ಸ್ಥಳ | - ದೊಡ್ಡಬುಕ್ಕಸಾಗರ, ಕಡೂರು ತಾಃ | | |

ದಿನಾಂಕಃ 16-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ.7 ನನ್ನ ತಂದೆ, ಚಾಸಾ.21 ನನ್ನ ತಾಯಿ. ನನ್ನ ತಂದೆ ತಾಯಿಗೆ ನಾವು ಒಟ್ಟ ಇಬ್ಬರು ಮಕ್ಕಳು ಅವರೆಂದರೆ ನಾನು ಮತ್ತು ನನ್ನ ತಮ್ಮ ಮಂಜುನಾಥ. ಮಂಜುನಾಥ ಈಗ ಬದುಕಿಲ್ಲ. ದಿನಾಂಕಃ 28.04.2018 ರಂದು ರಾತ್ರಿ 10.00 ರಿಂದ 10.30 ಗಂಟೆಗೆ ನನ್ನ ತಂದೆ ನನಗೆ ಕರೆ ಮಾಡಿ ಮಂಜುನಾಥನಿಗೆ ಫೋನ್ ಹೋಗುತ್ತಿಲ್ಲ, ನಿನಗೇನಾದರೂ ಆತ ಕರೆ ಮಾಡಿದ್ದನೆ ಎಂದು ಕೇಳಿದರು ಆಗ ನಾನು ಕಡೂರಿನಲ್ಲಿದ್ದೆನು. ಆನಂತರ ನಾನು ಕಡೂರಿನಿಂದ ಬುಕ್ಕಸಾಗರಕ್ಕೆ ಹೋದೆನು. ಆಗ ಮನೆಯಲ್ಲಿ ನನ್ನ ತಂದೆ ತಾಯಿ ಮತ್ತು ನನ್ನ ತಮ್ಮನ ಹೆಂಡತಿ ಇದ್ದರು. ಆಗ ಅವರು ಆ ದಿನ ಸಂಜೆ 7.30 ಗಂಟೆಗೆ ನನ್ನ ತಮ್ಮ ಬೋಂಡ ತರುವುದಾಗಿ ಹೇಳಿ ಬೈಕಿನಲ್ಲಿ ಅಂಗಡಿಗೆ ಹೋಗಿದ್ದಾಗಿ ಹೇಳಿದರು. ನಂತರ ನಾನು ಸಹ ನನ್ನ ತಮ್ಮನ ಫೋನಿಗೆ ಕರೆ ಮಾಡಿದೆನು, ಆದರೆ ಆತನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಆ ದಿನ ರಾತ್ರಿ ನಾವೆಲ್ಲರೂ ಸೇರಿ ನಮ್ಮ ತೋಟಗಳಲ್ಲಿ

ಮತ್ತು ಇತರೆ ಸ್ಥಳಗಳಲ್ಲಿ ನನ್ನ ತಮ್ಮನಿಗಾಗಿ ಹುಡುಕಾಡಿದೆವು. ಆದರೆ ಆತನ ಪತ್ತೆಯಾಗಲಿಲ್ಲ. ಮಾರನೆಯ ದಿನ ನಮ್ಮ ಸಂಬಂಧಿಕರಿಗೆ ಕರೆ ಮಾಡಿ ವಿಚಾರಿಸಿದೆವು, ಆದರೆ ನನ್ನ ತಮ್ಮ ಅವರುಗಳ ಮನೆಗೆ ಹೋಗಿಲ್ಲವೆಂದು ತಿಳಿದುಬಂತು. ನಂತರ ನನ್ನ ತಮ್ಮ ಕಾಣೆಯಾಗಿದ್ದ ವಿಚಾರದಲ್ಲಿ ದೂರು ನೀಡಲು ನನ್ನ ತಂದೆ ಸೋಮವಾರ ಬೆಳಿಗ್ಗೆ ಅಂದರೆ ದಿನಾಂಕಃ 30.04.2018 ರಂದು ನನ್ನನ್ನು ಕಡೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ನನ್ನ ತಂದೆ ನನ್ನ ತಮ್ಮ ಕಾಣೆಯಾಗಿದ್ದ ವಿಚಾರದಲ್ಲಿ ದೂರು ನೀಡಿದರು. ದೂರು ನೀಡಿದ ಬಳಿಕವೂ ನಾವು ನಮ್ಮ ತಮ್ಮನನ್ನು ಎಲ್ಲಾ ಕಡೆ ಹುಡುಕಾಡುತ್ತಿದ್ದೆವು ಆದರೆ ಆತನ ಪತ್ತೆಯಾಗಲಿಲ್ಲ.

2. ದಿನಾಂಕಃ 13.05.2018 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ಕಡೂರು ಪೊಲೀಸರು ನಮ್ಮ ಮನೆಯ ಬಳಿ ಬಂದು ನನ್ನ ತಮ್ಮನ ವಿಚಾರದಲ್ಲಿ ಏನೋ ಸುಳಿವು ಸಿಕ್ಕಿದೆ ಎಂದು ಹೇಳಿ ಮಾರನೆಯ ದಿನ ಠಾಣೆಗೆ ಬರುವಂತೆ ತಿಳಿಸಿದರು. ನಂತರ ಮಾರನೆಯ ದಿನ ಬೆಳಿಗ್ಗೆ ನಾನು ಮತ್ತು ನನ್ನ ತಂದೆ ಬೈಕಿನಲ್ಲಿ ಕಡೂರು ಪೊಲೀಸ್ ಠಾಣೆಗೆ ಹೋದೆವು. ಆಗ ಅಲ್ಲಿ ನಮ್ಮ ಊರಿನವರಾದ ಚಾಸಾ.4 ಲೋಕೇಶ ಮತ್ತು ಚಾಸಾ.5 ನಾಗರಾಜ ಇದ್ದರು ಮತ್ತು ಪೊಲೀಸ್ ಠಾಣೆಯ ಸೆಲ್ ನಲ್ಲಿ 1 ನೇ ಆರೋಪಿಯಾದ ಪ್ರದೀಪನನ್ನು ಕೂರಿಸಿದ್ದರು. ನಂತರ ಪೊಲೀಸರನ್ನು ವಿಚಾರಿಸಲಾಗಿ ಅವರು ಪ್ರದೀಪ ಮತ್ತು ಮಂಜುನಾಥ ನನ್ನ ತಮ್ಮನನ್ನು ಕೊಲೆ ಮಾಡಿರುವುದಾಗಿ ತಿಳಿಸಿದರು. ಪೊಲೀಸರಿಗೆ 1 ನೇ ಆರೋಪಿ ಪ್ರದೀಪ ನನ್ನ ತಮ್ಮನನ್ನು ಆತ ಮತ್ತು 2 ನೇ ಆರೋಪಿ ಮಂಜುನಾಥ ಕೊಲೆ ಮಾಡಿದ್ದಾಗಿ ತಿಳಿಸಿರುವುದಾಗಿ ಹೇಳಿದರು. ಆಗ ಚಾಸಾ.4 ಮತ್ತು 5 ರವರು

ಒಂದನೇ ಆರೋಪಿಯನ್ನು ಮಾತನಾಡಿಸಿದರು. ನಂತರ ಪೊಲೀಸರು ಒಂದನೇ ಆರೋಪಿ, ಚಾಸಾ.4 ಮತ್ತು 5 ರವರೊಂದಿಗೆ ಜೀಪಿನಲ್ಲಿ ಪೊಲೀಸ್ ಠಾಣೆಯಿಂದ ಹೊರಟರು, ನಮಗೆ ಇನ್ನೊಂದು ಜೀಪಿನಲ್ಲಿ ಬರುವಂತೆ ಹೇಳಿದರು ಆದರೆ ಆ ಜೀಪಿನಲ್ಲಿ ಹೆಚ್ಚು ಜನರಿದ್ದ ಕಾರಣ ನಾನು ಮತ್ತು ನನ್ನ ತಂದೆ ಬೈಕಿನಲ್ಲಿ ಅವರನ್ನು ಹಿಂಬಾಲಿಸಿದೆವು. ಪೊಲೀಸರ ಎರಡು ಜೀಪುಗಳು ಕಡೂರಿನಿಂದ ಚಿಕ್ಕಮಗಳೂರಿಗೆ ಬರುವ ರಸ್ತೆಯಲ್ಲಿರುವ ಕಣಿವೆ ಆಂಜನೇಯ ಸ್ವಾಮಿ ದೇವಸ್ಥಾನದ ಬಲಭಾಗಕ್ಕೆ ಇರುವ ಒಂದು ರಸ್ತೆಯ ಒಳಗೆ ಒಂದೆರಡು ಕಿಲೋ ಮೀಟರ್ ದೂರಕ್ಕೆ ಹೋಗಿ ನಿಲ್ಲಿಸಿದರು. ನಾವು ಅವರುಗಳನ್ನು ಹಿಂಬಾಲಿಸಿ ಅಲ್ಲಿಗೆ ಹೋಗಿ ಬೈಕನ್ನು ನಿಲ್ಲಿಸಿದೆವು. ನಂತರ 1 ನೇ ಆರೋಪಿ ಪ್ರದೀಪ, ಲೋಕೇಶ, ನಾಗರಾಜ ಮತ್ತು ಪೊಲೀಸರನ್ನು ಕರೆದುಕೊಂಡು ಅಲ್ಲಿಂದ 300 ಅಡಿ ದೂರಕ್ಕೆ ಕರೆದುಕೊಂಡು ಹೋಗಿ ಆತ ಕೈ ತೋರಿಸಿದನು. 1 ನೇ ಆರೋಪಿ ಕೈ ತೋರಿಸಿದ ಸ್ಥಳದಲ್ಲಿ ಒಂದು ಶವವಿತ್ತು. ನಂತರ ಪೊಲೀಸರು ನಮ್ಮನ್ನು ಅಲ್ಲಿಗೆ ಕರೆದರು. ಆಗ ನಾನು ಮತ್ತು ನನ್ನ ತಂದೆ ಅಲ್ಲಿಗೆ ಹೋದೆವು. ಆ ಶವವನ್ನು ನಾವು ನೋಡಿದಾಗ ಅದು ನನ್ನ ತಮ್ಮ ಮಂಜುನಾಥನದ್ದು ಎಂದು ಗೊತ್ತಾಯಿತು. ಆತನ ಶವ ಅರ್ಧಂಬರ್ಧ ಸುಟ್ಟು ಹೋಗಿತ್ತು. ಶವದ ಬಲಗೈನಲ್ಲಿ ಬೆಳ್ಳಿ ಕಡಗ ಇತ್ತು, ಆತನ ಮುಖ, ಹಲ್ಲುಗಳು ಮತ್ತು ಅರ್ಧಂಬರ್ಧ ಸುಟ್ಟು ಹೋಗಿದ್ದ ಬಟ್ಟೆಗಳನ್ನು ನೋಡಿ ಆ ಶವ ನನ್ನ ತಮ್ಮ ಮಂಜುನಾಥನದ್ದು ಎಂದು ಗೊತ್ತಾಯಿತು. ಶವದ ಕುತ್ತಿಗೆಯಲ್ಲಿ ಕ್ಲಚ್ ವೈಯರ್ ಇತ್ತು, ಶವ ಬಿದ್ದಿದ್ದ ಸ್ಥಳದಿಂದ 5 ಅಡಿ ದೂರದಲ್ಲಿ 5 ಲೀಟರ್ ನ ಡೀಸೆಲ್ ಕ್ಯಾನ್ ಇತ್ತು. ಅಲ್ಲಿ 1 ನೇ ಆರೋಪಿ ನನ್ನ

ತಂದೆ, ಊರಿನ ಗ್ರಾಮಸ್ಥರು, ನಾಗರಾಜ, ಲೋಕೇಶ, ನನ್ನ ಮತ್ತು ಪೊಲೀಸರ ಸಮಕ್ಷಮ ಆತನ ಹೆಂಡತಿಗೆ ನನ್ನ ತಮ್ಮ ಮಂಜುನಾಥ ಫೋನ್ ಮಾಡುತ್ತಿದ್ದುದಾಗಿ ಮತ್ತು ಆ ವಿಷಯದಲ್ಲಿ ಆತ ಮಂಜುನಾಥನಿಗೆ 2 ರಿಂದ 3 ಬಾರಿ ಬುದ್ಧಿವಾದ ಹೇಳಿದ್ದಾಗಿ ಆದರೂ ಸಹ ಮಂಜುನಾಥ ಕೇಳದಿದ್ದಾಗ ಪ್ರದೀಪ ಆತನ ಬಾಮೈದುನನಾದ 2 ನೇ ಆರೋಪಿ ಮಂಜುನಾಥನೊಂದಿಗೆ ದಿನಾಂಕಃ 28.04.2018 ರಂದು ರಾತ್ರಿ 7.30 ಗಂಟೆ ಸಮಯಲ್ಲಿ ತೋಟದಲ್ಲಿ ಮೋಟರ್ ಸ್ಟಾರ್ಟ್ ಆಗುತ್ತಿಲ್ಲವೆಂದು ಹೇಳಿ ನನ್ನ ತಮ್ಮನನ್ನು ತೋಟಕ್ಕೆ ಕರೆದುಕೊಂಡು ಹೋಗಿ ನನ್ನ ತಮ್ಮ ಸ್ಟಾರ್ಟರ್ ರಿಪೇರಿ ಮಾಡುವ ಸ್ಥಳದಲ್ಲಿ ಕುಳಿತಿದ್ದಾಗ ಆತನ ಪಕ್ಕದಲ್ಲಿ 2 ನೇ ಆರೋಪಿ ಮಂಜುನಾಥ ಕುಳಿತಿದ್ದಾಗ 1 ನೇ ಆರೋಪಿ ವಾಲ್ ಚೇಂಜ್ ಮಾಡಿ ಬರುವುದಾಗಿ ಹೇಳಿ ಹೋಗಿ ನನ್ನ ತಮ್ಮನ ಹಿಂದಿನಿಂದ ಬಂದು ಕ್ಲಚ್ ವೈಯರ್ ನ್ನು ನನ್ನ ತಮ್ಮನ ಕುತ್ತಿಗೆಗೆ ಹಾಕಿ ಬಿಗಿಯಾಗಿ ಎಳೆದು ಸಾಯಿಸಿದ್ದಾಗಿ ಮತ್ತು ಆ ಸಮಯದಲ್ಲಿ 2 ನೇ ಆರೋಪಿ ನನ್ನ ತಮ್ಮನ ಕೈ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದಾಗಿ ನಂತರ ಇಬ್ಬರು ಆರೋಪಿತರು ನನ್ನ ತಮ್ಮನ ಶವವನ್ನು ಬೈಕಿನಲ್ಲಿ ಕಟ್ಟಿಕೊಂಡು ಪ್ಲಾಂಟೇಷನ್ ಒಳಗೆ ಹೋಗಿ ಅಲ್ಲಿ ನನ್ನ ತಮ್ಮನ ಶವದ ಮೇಲೆ ಡೀಸೆಲ್ ನ್ನು ಹಾಕಿ ಸುಟ್ಟಿದ್ದಾಗಿ 1 ನೇ ಆರೋಪಿ ತಿಳಿಸಿದನು. ಚಾಸಾ.18 ಶಿವಾನಂದ ಮತ್ತು ಚಾಸಾ.19 ಚಂದ್ರಪ್ಪರವರು ಆರೋಪಿತರು ನನ್ನ ತಮ್ಮನನ್ನು ಬೈಕಿನಲ್ಲಿ ಕರೆದುಕೊಂಡು ಹೋಗುವುದನ್ನು ನೋಡಿದ್ದಾಗಿ ನನಗೆ ತಿಳಿಸಿದರು.

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.